'ಇಂಗ್ಲಿಷ್ ಸಾಹಿತ್ಯ ಚರಿತ್ರೆ' ಕೃತಿಯ ಮುನ್ನುಡಿಯಲ್ಲಿ ಎಲ್.ಎಸ್.ಎಸ್. ಅವರು, 'ನೂರು ವರುಷಕ್ಕೂ ಹೆಚ್ಚಿನ ಹಿನ್ನೆಲೆಯ ಇಂಗ್ಲಿಷ್-ಕನ್ನಡ ಸಂಬಂಧಕ್ಕೆ ಇಂಗ್ಲಿಷ್ ಸಾಹಿತ್ಯ ಪರಿಚಯ ಮಾಡಿಕೊಳ್ಳಬಯಸುವವರಿಗೆ ಕನ್ನಡದಲ್ಲಿ (ಇದೊಂದು) ಪುಸ್ತಕ' ಎಂದು ಹೇಳಿರುವ ಮಾತು ಈ ಕೃತಿರಚನೆಯ ಹಿಂದಿರುವ ಕನ್ನಡಕ್ಕೊಂದು ಆಕರ ಗ್ರಂಥವನ್ನು ಒದಗಿಸುವ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಇಂಗ್ಲಿಷ್‌ನ ಅಧಿಕೃತ ಬೈಬಲ್ ಅನುವಾದ ಕಿಂಗ್ ಜೇಮ್ಸ್ ಆವೃತ್ತಿ ಆಂಗ್ಲರ ಭಾಷೆಗೆ ನೀಡಿದ ಹೊಸ ನುಡಿಗಟ್ಟುಗಳ ವಿವರಣೆ ಅವರು ಕನ್ನಡಕ್ಕೆ ಕೊಟ್ಟ ಆಕರ ಗ್ರಂಥಗಳ ಸೂಕ್ಷ್ಮಗಳನ್ನೂ ಅದರ ಸ್ವರೂಪವನ್ನು ಸೂಚಿಸುತ್ತದೆ. ಅವಿದ್ಯಾವಂತರ ಭಾಷೆಯ ಭಾಗವಾಗಿದ್ದ ಮುಂದಿನ ನುಡಿಗಟ್ಟುಗಳು ಇಂಗ್ಲಿಷ್ ಭಾಷೆಯಲ್ಲಿ ಅಧಿಕೃತವಾಗಿ ಸ್ವೀಕಾರಗೊಂಡು ಸೇರಿದ ಕ್ರಮವೇ ಒಂದು ವಿಸ್ಮಯ.

'ಇಂಗ್ಲಿಷ್ ಸಾಹಿತ್ಯ ಚರಿತ್ರೆ' ಕೃತಿ ನಾಲ್ಕು ಮುಖ್ಯ ಭಾಗಗಳಲ್ಲಿ ಸಮಗ್ರ ಇಂಗ್ಲಿಷ್ ಸಾಹಿತ್ಯವನ್ನು ವಿವರವಾಗಿ ಪರಿಚಯಿಸುತ್ತದೆ. ಇಂಗ್ಲಿಷ್, ಯುರೋಪಿಯನ್, ಅಮೆರಿಕನ್ ಸಾಹಿತ್ಯ, ಚಿಂತನೆಗಳನ್ನು ವಿವರವಾಗಿ ಕನ್ನಡ ಓದುಗರಿಗೆ ಪರಿಚಯಿಸಿ ವಿಮರ್ಶಿಸುವ ಎಲ್.ಎಸ್.ಎಸ್. ಅವರ ಬರಹಗಳ ಅವಲೋಕನಕ್ಕೆ ಸಾಕಷ್ಟು ದೀರ್ಘ ಲೇಖನವೊಂದು ಬೇಕಾಗಬಹುದಾದ್ದರಿಂದ ಇಲ್ಲಿಗೆ ಆ ವಿಚಾರವನ್ನು ಮೊಟಕುಗೊಳಿಸುವುದು ಅನಿವಾರ್ಯವಾಗಿದೆ. (ಈ ಬಗ್ಗೆ ಹೆಚ್ಚಿನ ವಿವರಗಳ ಬಗ್ಗೆ ಆಸಕ್ತಿಯುಳ್ಳವರು ಫೆಬ್ರುವರಿ 2023ರಂದು ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಪ್ರೊ. ಎಲ್.ಎಸ್. ಶೇಷಗಿರಿರಾವ್ ಬಗ್ಗೆ ನಾನು ನೀಡಿದ ನಾಲ್ಕು ವಿಶೇಷ ಉಪನ್ಯಾಸಗಳನ್ನು ಗಮನಿಸಬಹುದು. ಗೋಖಲೆ ಸಾರ್ವಜನಿಕ ಸಂಸ್ಥೆಯ ವೆಬ್ ಸೈಟಿನಲ್ಲಿ ಅವು ಲಭ್ಯವಿವೆ).

ಎಲ್.ಎಸ್.ಎಸ್. ಅವರು ಯುರೋಪಿಯನ್ ಸಾಹಿತ್ಯದ ವಿಸ್ತಾರವಲ್ಲದೆ, ಅದರೊಡನೆ ಆಫ್ರಿಕನ್ ಹಾಗೂ ಕಾಮನ್‌ವೆಲ್ತ್ ಸಾಹಿತ್ಯ ಕುರಿತಾಗಿಯೂ ಬರೆದಿದ್ದಾರೆ. ಅವರ ಪಾಂಡಿತ್ಯದ ಹರಹು ಬಹಳ ದೊಡ್ಡದು ಎಂದು ಪ್ರತ್ಯೇಕವಾಗಿ ಹೇಳಬೇಕಾದ ಕಾರಣವಿಲ್ಲ. ಗ್ರೀಕ್, ರಷ್ಯಾ, ಇಟಲಿ, ಜರ್ಮನಿ, ಫ್ರೆಂಚ್, ಇಂಗ್ಲಿಷ್, ಅಮೆರಿಕ, ಆಫ್ರಿಕಾ ದೇಶಗಳು ಹೀಗೆ ಅವರ ವಿಮರ್ಶೆ ಒಳಗೊಂಡಿರುವ ಹಲದೇಶಗಳ ಸಾಹಿತ್ಯದ ಹರಹು ಅವನ್ನು ಕನ್ನಡ ಓದುಗರಿಗೆ ಪರಿಚಯಿಸುವುದೇ ಆಗಿದೆ. ಅದಕ್ಕಾಗಿ ಅವರು ನೀಡಿದ ಸಮಯ, ವ್ಯಯಿಸಿದ ಶ್ರಮದ ಹಿನ್ನೆಲೆಯಲ್ಲಿ ಅವರಿಗಿದ್ದುದು ತನ್ನ ಕನ್ನಡ ಭಾಷೆ ತಾನು ಕಲಿತ ಕ್ಷೇತ್ರದಲ್ಲಿ ಜಗತ್ತಿನ ಮುಖ್ಯ ಸತ್ವವನ್ನು ಪಡೆದು ಸಮೃದ್ಧವಾಗಬೇಕೆಂಬ ಆಸೆ. ನಮ್ಮ ನೆಲದ ಕನ್ನಡ ಭಾಷೆಯನ್ನು ಜಗತ್ತಿನ ಜ್ಞಾನ-ವಿಜ್ಞಾನ-ಸಾಹಿತ್ಯಗಳಿಂದ ಶ್ರೀಮಂತಗೊಳಿಸಬೇಕೆಂಬ ನವೋದಯದ ಆಶಯವನ್ನು ಕಾಯಾ ವಾಚಾ ಮನಸಾ ಅನುಸರಿಸಿ, ಅದರಂತೆ ನಡೆದುಕೊಂಡವರು ಎಲ್.ಎಸ್.ಎಸ್. ಅಂತಹ ಉನ್ನತ ಧ್ಯೇಯದ ಕನ್ನಡ ಪ್ರೀತಿಯೇ ಅವರಿಗೆ ಹೀಗೆ ಹನಿಕಡಿಯದೆ ದುಡಿಯುವ ಶಕ್ತಿ ನೀಡಿರಬೇಕು.

ಜಾಗತಿಕ ಕಾದಂಬರಿ ರತ್ನಗಳಲ್ಲಿ ಎಲ್.ಎಸ್.ಎಸ್. ಅವರಿಗೆ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕೃತಿಯೂ ಒಂದು. ಭಾರತೀಯ ಸಂಸ್ಕೃತಿ ಬರಹಗಳಲ್ಲಿ ಅವರು ಎತ್ತಿ ಹಿಡಿಯುವುದು ರಾಜಾರಾವ್ ಅವರ ಬರಹಗಳನ್ನು. ಒಂದೇ ಒಂದು ಭಾಷೆಯಲ್ಲಿ ಮಾತ್ರ ವ್ಯವಹರಿಸಬೇಕು ಎಂಬ ನಿರ್ಬಂಧ ಇದ್ದಿದ್ದರೆ ಅವರು ಬಳಸುತ್ತಿದ್ದುದು ಕನ್ನಡ ಮಾತ್ರ ಎಂಬುದು ಸ್ಪಷ್ಟ.

ಅಗಾಧವಾದ ಓದಿನಿಂದ ತೌಲನಿಕ ವಿಮರ್ಶೆ ಅವರ ಬರಹಗಳ ಮುಖ್ಯ ಲಕ್ಷಣಗಳಲ್ಲಿ ಒಂದಾಯಿತು. ತೌಲನಿಕ ಚಿಂತನಾಕ್ರಮ ಅವರು ಬಹುಭಾಷಾ ಪಾಂಡಿತ್ಯದಿಂದ ಪಡೆದ ಮುಖ್ಯ ಲಕ್ಷಣವಾಯಿತು. ಹೀಗಾಗಿಯೇ ಅವರು 'ನಮ್ಮ ಸಾಹಿತ್ಯ ವಿಮರ್ಶೆಯು ಗಟ್ಟಿ ಬುನಾದಿಯ ಮೇಲೆ ನಿಲ್ಲಬೇಕಾದರೆ ಮತ್ತು ನಮ್ಮ ಸಾಹಿತ್ಯದಲ್ಲಿ ನಮಗಿರುವ ಪಕ್ಷಪಾತದಿಂದ ಕೃತಿಗಳ ಮೌಲ್ಯಮಾಪನದ ದಿಕ್ಕು ಕೆಡದೆ ಉಳಿಯಬೇಕಾದರೆ ಸಾಹಿತ್ಯ ಪ್ರಕಾರಗಳ ಸ್ವರೂಪ ಮತ್ತು ಸಾಧ್ಯತೆಗಳ ಸ್ಪಷ್ಟ ಅರಿವು ಅಗತ್ಯ. ಇದಕ್ಕೆ ರಾಜಮಾರ್ಗ ತೌಲನಿಕ ಅಧ್ಯಯನ' ಎಂದು ಸ್ಪಷ್ಟವಾಗಿಯೇ ತಮ್ಮ 'ಕಾದಂಬರಿ ರತ್ನಗಳು' ಕೃತಿಯಲ್ಲಿ ಹೇಳಿದರು. 'ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ' ಎಂಬ ಕೃತಿಯನ್ನು ಇ.ಎಮ್. ಫಾಸ್ಟರನ 'Aspects of Novel' ಮಾದರಿಯಲ್ಲಿ 1954ರಲ್ಲಿ ಪ್ರಕಟಿಸಿದ ಎಲ್.ಎಸ್.ಎಸ್. ಅವರ ವಿಮರ್ಶೆ ವಸ್ತು ಗ್ರಹಿಕೆಯಲ್ಲಿ ಕಾಲಕ್ರಮೇಣ ಮಾಗುತ್ತಾ ಹೋದ ಕ್ರಮವನ್ನು 'ಕಾದಂಬರಿ ರತ್ನಗಳು' ಕೃತಿಯ